

ಬಗೆಬಗೆ ಬಣ್ಣದ ಬಳೆ ಚೂರುಗಳಿಂದ ಮಾಡಿದ ನವಿಲುಗಳು



ಬಟ್ಟೆಗಳಿಂದ ರೂಪಿಸಿದ ಎಮ್ಮೆ ಹಾಗೂ ರೈತ



ಜಲಪಾತಕ್ಕೆ ಹೋಗಲು ಎಂಥ ಸುಂದರ ಮಾರ್ಗ!

ಶಿಲೆಗಳಲ್ಲೇ ರೂಪುಗೊಂಡ ಸೊಬಗಿನ ಉದ್ಯಾನ.

## ಚೆಂದದ ಶಿಲ್ಪಗಳ ಚಾಂದ್

ನೆಕ್ ಚಾಂದ್ (ಜನನ: 15ನೇ ಡಿಸೆಂಬರ್ 1924) ಅವರ ಮೂಲ ಊರು ಶಕರ್ಗಢ ತಾಲ್ಲೂಕಿನ ಬರಿಯನ್ ಕಾಲನ್. (ಈಗ ಪಾಕಿಸ್ತಾನದಲ್ಲಿದೆ). ದಾರಿಯಲ್ಲಿ ಸಿಗುವ ಕಲ್ಲುಗಳಿಂದ ಸುಂದರ ಗೊಂಬೆ ಮಾಡುವ ಪ್ರವೃತ್ತಿ ಬಾಲ್ಯದಲ್ಲೇ ಇತ್ತು. ದೇಶವಿಭಜನೆ ಸಂದರ್ಭದಲ್ಲಿ ಅವರ ಕುಟುಂಬ ಭಾರತಕ್ಕೆ ವಲಸೆ ಬಂದಿತು. ಬಳಿಕ 1955ರಲ್ಲಿ ಚಂಡೀಗಢಕ್ಕೆ ಬಂದು ನೆಲೆಸಿತು. ಆ ಸಮಯದಲ್ಲಿ ಫ್ರಾನ್ಸ್‌ನ ವಾಸ್ತುಶಿಲ್ಪಿ ಲೆ ಕಾರ್ಬುಸಿಯರ್ ಚಂಡೀಗಢ ಪಟ್ಟಣವನ್ನು ಪುನರ್ ವಿನ್ಯಾಸ ಮಾಡುತ್ತಿದ್ದರು. ಆ ಯೋಜನೆಯಡಿ ಲೋಕೋಪಯೋಗಿ ಇಲಾಖೆಯ ರಸ್ತೆ ಮೇಲುಸ್ತುವಾರಿ ಅಧಿಕಾರಿಯಾಗಿ ಕೆಲಸಕ್ಕೆ ಸೇರಿದರು.

ನಗರದ ಪುನರ್ವಿನ್ಯಾಸ ಸಂದರ್ಭದಲ್ಲಿ ಕಟ್ಟಡಗಳನ್ನು ತೆರವುಗೊಳಿಸಿದಾಗ, ಅಪಾರ ಪ್ರಮಾಣದ ತ್ಯಾಜ್ಯ ಉತ್ಪತ್ತಿಯಾಗುತ್ತಿತ್ತು. ಚಾಂದ್ ಅದನ್ನು ಗಮನಿಸಿ, ತ್ಯಾಜ್ಯವನ್ನು ಮರುಬಳಕೆ ಮಾಡುವತ್ತ ಚಿಂತನೆ ನಡೆಸಿದರು. ತಲೆಯಲ್ಲಿ ಏನೇನೋ ಹೊಳೆಯಿತು.

ತೆರವುಗೊಳಿಸಿದ ಕಟ್ಟಡಗಳ ಅವಶೇಷಗಳನ್ನು ಸಂಗ್ರಹಿಸಲು ಚಾಂದ್ ಶುರು ಮಾಡಿದರು. ಸುಖ್ನಾ ಸರೋವರದ ದಡದಲ್ಲಿ ಇದ್ದ ಅರಣ್ಯಕ್ಕೆ ಯಾರಿಗೂ ತಿಳಿಯದಂತೆ ಅವುಗಳನ್ನು ತಂದು ಹಾಕಿದರು (1958). ಆದರೆ ಆ ಅರಣ್ಯದ ಜಾಗದಲ್ಲಿ ಯಾವುದೇ ನಿರ್ಮಾಣ ಕಾಮಗಾರಿ ಕೈಗೊಳ್ಳಬಾರದು ಎಂದು 1902ರಲ್ಲಿಯೇ ಆದೇಶ ಹೊರಡಿಸಲಾಗಿತ್ತು. ಹಾಗಿದ್ದರೂ ಯಾವುದೋ ಧೈರ್ಯದಿಂದ ನೆಕ್ ಚಾಂದ್ ಅವರು ತ್ಯಾಜ್ಯದಿಂದ ಒಂದೊಂದು ಬಗೆಯ ಕಲಾಕೃತಿಗಳನ್ನು ರಚಿಸಲು ಆರಂಭಿಸಿದರು. ಪ್ರತಿಬಂಧಿಸಿದ ಪ್ರದೇಶದಲ್ಲಿ ಯಾವುದೇ ಕಾಮಗಾರಿ ಮಾಡುವುದು ನಿಷೇಧಿಸಿದ್ದರಿಂದ, ಚಾಂದ್ ಅವರ ಕೆಲಸ ‘ಅಕ್ರಮ’ವಾಗಿತ್ತು. ಅವರ ನಿರ್ಮಾಣ ಕಾರ್ಯ ಒಂದೆರಡಲ್ಲ; ಸತತ 18 ವರ್ಷಗಳ ಕಾಲ ರಹಸ್ಯವಾಗಿ ನಡೆಯಿತು.